ಕಾರ್ಡಿವೆ. ದಾಸಪ್ಪನಪಾಳ್ಯದಲ್ಲಿ ೮ ಹಸಿರು ಕಾರ್ಡು ಮತ್ತು ೧೨ ಕೇಸರಿ ಕಾರ್ಡು ಆರ್ ಗೊಲ್ಲರಹಳ್ಳಿಯಲ್ಲಿ ೧೯ ಹಸಿರು ಕಾರ್ಡು ಮತ್ತು ೭೦ ಕೇಸರಿ ಕಾರ್ಡು, ಕಟ್ಟಿದಾಸಪ್ಪನಪಾಳ್ಯದಲ್ಲಿ ೨೦ ಹಸಿರು ಕಾರ್ಡು ಮತ್ತು ೧೦ ಕೇಸರಿ ಕಾರ್ಡು ಹಾಗೆಯೇ ಕಟ್ಟಿದಾಸಪ್ಪನ ಗೊಲ್ಲರಹಟ್ಟಿಯಲ್ಲಿ ೬ ಹಸಿರುಕಾರ್ಡು ಮತ್ತು ೫ ಕೇಸರಿ ಕಾರ್ಡುಗಳಿವೆ. ಎಲ್ಲಾ ಸೇರಿ ಒಟ್ಟಿನಲ್ಲಿ ೫೬ ಆಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಕಟ್ಟಿ ದಾಸಪ್ಪನಪಾಳ್ಯ ಸುಮಾರು ೪ ಕಿಲೋ ಮೀಟರ ಮೇಲೆ ಆಗುತ್ತದೆ. ರೆಡ್ಡಿ ಹಳ್ಳಿಯಿಂದ ಅಲ್ಲಿ ಬಂದು ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವುದಕ್ಕೆ ತೊಂದರೆಯಾಗುತ್ತದೆ. ಅಲ್ಲಿ ನ್ಯಾಯ ಬೆಲೆ ಅಂಗಡಿಯನ್ನು ಮಂಜೂರು ಮಾಡಿಕೊಡಬೇಕ ಎಂದು ಅವರು ಅರ್ಜಿ ಸಲ್ಲಿಸಿದ್ದಾರೆ ಅದು ತಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಯಾವಾಗ ಮಂಜೂರು ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಏಪ್ರಿಲ್ ಒಂದರಿಂದ ಗ್ರಾಮಾಂತರ ಪ್ರದೇಶಕ್ಕೆ ಆಹಾರ ಸಾಮಗ್ರಿಗಳನ್ನು ನೀಡುವ ನ್ಯಾಯ ಬೆಲೆ ಅಂಗಡಿಗಳು ಏನು ಇವೆ ಇವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ಅಂಗಡಿಗಳ ಅವಶ್ಯಕತೆ ಎಲ್ಲಿ ಇದೆ ಎಂಬ ನಿರ್ಣಯವನ್ನು ಅವರು ತೆಗೆದುಕೊಳ್ಳುತ್ತಾರೆ. ಇದನ್ನು ಜಿಲ್ಲಾ ಪರಿಷತ್ತಿನವರ ಗಮನಕ್ಕೆ ತಂದರೆ ಅವರು ಮಾಡಿಕೊಡಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಜಿಲ್ಲಾ ಪರಿಷತ್ತಿಗೆ ಮನವಿ ಬಂದಿದೆ. ಅದನ್ನು ತಿರಸ್ಕರಿಸಿದೆ ಎಂದು ಎರಡನೇ ಪ್ರಶ್ನೆಗೆ ಉತ್ತರವಾಗಿ ಹೇಳಿದ್ದಾರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸ್ವತಃ ತಾವೇ ತೀರ್ಮಾನ ತೆಗೆದುಕೊಳ್ಳಲಿಕ್ಕೆ ಅಧಿಕಾರವಿಲ್ಲ ವೆಂದು ತೀರ್ಮಾನ ಮಾಡಿದ್ದಾರೆ. ಇದಾದ ಮೇಲೆ ಈ ಅರ್ಜಿಯನ್ನು ಅವರು ತೀರ್ಮಾನ ಮಾಡಿಲ್ಲ. ಇದನ್ನು ತಾಲ್ಲೂಕು ಮಂಡಲಿಗೆ ಕಳಿಸಿ ಅಲ್ಲಿಂದ ಠರಾವಾಗಿ ಬರಬೇಕು. ಅಲ್ಲಿಂದ ಬರಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳತಕ್ಕಂಥ ಸಮಸ್ಯೆಗಳು ಬಹಳಷ್ಟು ಕಡೆಗಳಲ್ಲಿ ಬಂದಿದೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಮುಖ್ಯ ಕಾರ್ಯದರ್ಶಿಗಳು ಸೇರಿ ಎಲ್ಲೆ ಗ್ರಾಮದಿಂದ ಗ್ರಾಮಕ್ಕೆ ಬಹಳ ದೂರವೆಂದು ಎನಿಸಂತ್ತದೆ ಆಲ್ಲಿ ದುಸ್ಥಿತಿಯಾದರೆ ನಿಯಮವನ್ನು ಸಡಿಲಗೊಳಿಸ ಬಹುದೆಂದು ಸರಕಾರ ಸುತ್ತೋಲೆಯನ್ನು ಕಳಿಸಿದೆ. ಪುನಃ ಸದಸ್ಯರು ಇದನ್ನು ಒತ್ತಾಯಿಸಬೇಕೆಂದು ವಿನಂತಿ ಮಾಡುತ್ತೇನೆ.

ಬಸ್ ನಿಲ್ದಾಣಗಳಲ್ಲಿ ಕುಡಿಯಲಿಂವ ನೀರಿನ ವ್ಯವಸ್ಥೆ

೧೬೦೭. ಶ್ರೀ ಬಾಬುರೆಡ್ಡಿ ವಿ. ತುಂಗಳ್, (ಬೀಳಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ವಿಭಾಗದಲ್ಲಿ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಒಡೆತನದಲ್ಲಿರುವ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು).

ಆ) ಇವುಗಳಲ್ಲಿ ಎಷ್ಟು ನಿಲ್ದಾಣಗಳ ಆವರಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ ? ಈ ರೀತಿ ವ್ಯವಸ್ಥೆಯಿಲ್ಲದ ನಿಲ್ದಾಣಗಳು ಯಾವುವು ?

ಇ) ಈ ವಿಭಾಗದಲ್ಲಿ ಡಾಂಬರಿನ ಆವರಣ ಹೊಂದಿರುವ ನಿಲ್ದಾಣಗಳ ಸಂಖ್ಯೆ ಎಷ್ಟು? ಹಾಗೂ ಡಾಂಬರೀಕರಣವಾಗದೇ ಉಳಿದಿರುವ ನಿಲ್ದಾಣಗಳ ಹೆಸರುಗಳೇನು ?

ಈ) ದೂರವಾಣಿ ಸಂಪರ್ಕವಿರದೆ ನಿಲ್ದಾಣದ ಹೆಸರುಗಳು ಏನು ? ದೂರವಾಣಿ ಒದಗಿಸದೆ ಯಿರಲು ಕಾರಣಗಳೇನು ?

ಉ) ಈ ವರ್ಷ ಎಷ್ಟು ನಿಲ್ದಾಣಗಳ ಆವರಣಗಳನ್ನು ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ವಿಜಾಪುರ ವಿಭಾಗದಲ್ಲಿ ೨೯ ಬಸ್ ನಿಲ್ದಾಣಗಳನ್ನು ಸಂಸ್ಥೆ ಹೊಂದಿದೆ. (ವಿವರಗಳನ್ನು ಅನುಬಂಧ ಆ ನಲ್ಲಿ ಕೊಡಲಾಗಿದೆ).

ಆ) ೨೫ ಬಸ್ ನಿಲ್ದಾಣಗಳಲ್ಲಿ ನೀರಿನ ಅನುಕೂಲತೆ ಮಾಡಲಾಗಿದೆ. ಕಮ್ಮತಗಿ, ಕಂಲಗೇರಿ, ಅಮೀನಗರ್ ಮತ್ತು ಲೋಕಾಪುರ ಬಸ್ ನಿಲ್ದಾಣಗಳಲ್ಲಿ ನೀರಿನ ಅನುಕೂಲತೆ ಇನ್ನೂ ಒದಗಿಸಿಲ್ಲ.

ಇ) ಹತ್ತು ಬಸ್ ನಿಲ್ದಾಣಗಳ ಆವರಣಗಳನ್ನು ಡಾಂಬರು ಮಾಡಲಾಗಿದೆ. ೧೯ ಬಸ್ ನಿಲ್ದಾಣಗಳಲ್ಲಿ ಡಾಂಬರು ಮಾಡಲಾಗಿಲ್ಲ. ವಿವರಗಳನ್ನು ಅನುಬಂಧ 'ಆ'ನಲ್ಲಿ ಕೊಡಲಾಗಿದೆ.

ಈ) ೧೪ ಬಸ್ ನಿಲ್ದಾಣಗಳು ಟೆಲಿಫೋನ್ ಸೌಕರ್ಯ ಹೊಂದಿಲ್ಲ. ಅವು ಯಾವುವೆಂದರೆ.—

೧. ಬಬಲೇಶ್ವರ
೨. ಮಹಾಲಿಂಗಪುರ
೩. ಅಮೀನಗಡ್
೪. ಹುನಗುಂದ
೫. ಕೆರೂರು
೬. ಕುಲಗೇರಿ
೭. ಚಡಚಣ
೮. ಬೀಳಗಿ
೯. ಜಳಕಿ
೧೦. ದೇವರ ಹಿಪ್ಪರಗಿ
೧೧. ತಿಕೋಟ
೧೨. ತೇರದಾಳ್
೧೩. ಅಲ್ಮೇಲ್
೧೪. ಲೋಕಾಪುರ

ಅಮೀನಗಡ್, ಹನಂಗುಂದ, ಚಡಚಣ, ಬೀಳಗಿ, ಮಂತ್ತು ಜಳಕಿ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯ ಒದಗಿಸುವ ಯೋಜನೆ ಇದೆ. ಉಳಿದ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯಗಳನ್ನು ಹಂತ ಹಂತಗಳಲ್ಲಿ ಒದಗಿಸಲಾಗುವುದು.

ಉ) ೧೯೮೮-೮೯ನೇ ಸಾಲಿನಲ್ಲಿ ಈ ವಿಭಾಗದಲ್ಲಿರುವ ಬಸ್ ನಿಲ್ದಾಣಗಳ ಆವರಣಕ್ಕೆ ಡಾಂಬರು ಹಾಕುವ ಯೋಜನೆ ಇಲ್ಲ,

ಅನುಬಂಧ 'ಅ

ಬಿಜಾಪುರ ವಿಭಾಗದಲ್ಲಿ ಬಸ್ ನಿಲ್ದಾಣದ ವಿವರಗಳು

೧.	ಬಿಜಾಪುರ	೧೬.	ಬಬಲೇಶ್ವರ್
೨.	ಬಾದಮಿ	೧೭.	ಹಳಗೇರಿ
೩.	ಬಾಗಲಕೋಟೆ	೧೮.	ತಾಳಿಕೋಟ್
೪.	ಇಂಡಿ	೧೯.	ಮಹಾಲಿಂಗಪುರ
೫.	ಜಮಖಂಡಿ	೨೦.	ಚಂದ್‌ಚಾನ್
೬.	ಮುದ್ದೇಬಿಹಲ್	೨೧.	ಕಮ್ಟಗಿ
೭.	ಬಸವನಬಾಗೇವಾಡಿ	೨೨.	ಗುಲ್ಡಿಗುಡ್
೮.	ಬಿಳಗಿ	೨೩.	ದೇವರಹಿಪ್ಪರಗಿ
೯.	ಹುನಗುಂದ್	೨೪.	ಜಲ್ಕಿ
೧೦.	ಸಿಂದಗಿ	೨೫.	ತೇರ್ದಾಲ್
೧೧.	ಮುಧೋಳ್	೨೬.	ಟಕೋಟ
೧೨.	ಅಥನಿ	೨೭.	ಆಲ್‌ಮೇಲ್
೧೩.	ಇಳ್ಕಲ್	೨೮.	ರಬ್ಕವಿ
೧೪.	ಅವೀನಗಾಡ್	೨೯.	ಲೋಕಪುರ್
೧೫.	ಕೆರೋರ್		

ಡಾಂಬರ್ ಮಾಡಲಾಗಿಲ್ಲದ ಬಸ್ ನಿಲ್ದಾಣದ ವಿವರಗಳು

೧.	ಅಥನಿ	೧೧.	ಮುಧೋಳ್
೨.	ಜಮಖಂಡಿ	೧೨.	ಮಹಾಲಿಂಗಪುರ
೩.	ಟಕೋಟೆ	೧೩.	ರಬ್ಕವಿ
೪.	ಬಬಲೇಶ್ವರ್	೧೪.	ಆಲ್‌ಮೇಲ್
೫.	ದೇವರಹಿಪ್ಪರ್‌ಗಿ	೧೫.	ಚಾಂದ್‌ಚಾನ್
೬.	ಬಸವನಬಾಗೇವಾಡಿ	೧೬.	ಜಲ್ಕಿ
೭.	ಇಳ್ಕೆಲ್	೧೭.	ಕಮ್ಟಗಿ
೮.	ಬಿಳಗಿ	೧೮.	ಲೋಕಪುರ್
೯.	ಕೆರೋರ್	೧೯.	ಕುಳಗೇರಿ
೧೦.	ಗುಲ್ಡಿಗುಡ್		

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಸಾರಿಗೆ ಸಚಿವರು ಆಪ್ರಶ್ನೆಗೆ ಉತ್ತರ ಕೊಡುತ್ತಾ ಬಿಜಾಪುರ ವಿಭಾಗದಲ್ಲಿ ೨೯ ಬಸ್ ನಿಲ್ದಾಣಗಳನ್ನು ಸಂಸ್ಥೆ ಹೊಂದಿದೆ ೧೦ಬಸ್ ನಿಲ್ದಾಣಗಳಿಗೆ ಡಾಂಬರ್ ಹಾಕಲಾಗಿದೆ ಇನ್ನು ಉಳಿದುದಕ್ಕೆ ಡಾಂಬರ್ ಹಾಕಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ೧೦ ನಿಲ್ದಾಣಗಳಿಗೆ ಡಾಂಬರ್ ಹಾಕಿ ಎಷ್ಟು ವರ್ಷಗಳಾಗಿವೆ ? ಈಗ ಮತ್ತೊಮ್ಮೆ ಡಾಂಬರ್ ಹಾಕುವ ಪ್ರಸಂಗ ಬಂದಿದೆಯೇ ? ಉಳಿದಂತಹ ಸುಮಾರು ೧೯ ಬಸ್‌ನಿಲ್ದಾಣದ ಆವರಣಕ್ಕೆ ಡಾಂಬರು ಹಾಕುವುದಕ್ಕೆ ಏನು ತೊಂದರೆಯಿದೆ? ತಾಲ್ಲೂಕು ಕೇಂದ್ರವಾಗಿರುವಂತಹ ಬಸ್ ನಿಲ್ದಾಣಗಳಿಗಾದರೂ ಡಾಂಬರ್ ಹಾಕುವ ಕಾರ್ಯಕ್ರಮವನ್ನು ಈ ವರ್ಷದ ಪ್ರೋಗ್ರಾಂನಲ್ಲಿ ಏನಾದರೂ ಇಟ್ಟುಕೊಂಡಿದ್ದೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈ ಯೋಜನೆಯ ಅಡಿಯಲ್ಲಿ ಯಾವುದೇ ಬಸ್ ನಿಲ್ದಾಣಕ್ಕೆ ಡಾಂಬರ್ ಹಾಕುವಂತಹ ಕಾರ್ಯಕ್ರಮವನ್ನು ಇಟ್ಟುಕೊಂಡಿಲ್ಲ. ತಾಲ್ಲೂಕು ಕೇಂದ್ರದಲ್ಲಿರುವಂತಹ ಬಸ್

ನಿಲ್ದಾಣಗಳಲ್ಲಿ ತೀರಾ ಡಾಂಬರ್ ಹೋಗಿದ್ದರೆ ಅದನ್ನು ರಿಪೇರಿ ಮಾಡಿಸುವುದಕ್ಕೆ ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಬಾಬುರೆಡ್ಡಿ ಏ. ತಂಗಳ್.—ದೂರವಾಣಿ ಸಂಪರ್ಕ ಒದಗಿಸುವಂತಹ ಬಸ್ ನಿಲ್ದಾಣಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಆಮೀನಗಡ್, ಹುನಗುಂದ, ಬೀಳಗಿ, ಚಿಡಚಣ ಮತ್ತು ಜಳಕಿ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯವನ್ನು ಒದಗಿಸುವ ಯೋಜನೆಯಿದೆಯೆಂದು ಹೇಳಿದ್ದಾರೆ. ೧೪ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯ ಹೊಂದಿಲ್ಲವೆಂದು ತಿಳಿಸಿದ್ದಾರೆ. ತಾಲ್ಲೂಕು ಕೇಂದ್ರದಲ್ಲಿ ರಮಂತಹ ಬಸ್ ನಿಲ್ದಾಣಗಳಿಗೆ ಟೆಲಿಫೋನ್ ಸೌಕರ್ಯವನ್ನು ಕೊಡಬೇಕು. ಬಿಜಾಪುರದ ರಾಜ್ಯ ರಸ್ತೆ ಸಾರಿಗೆ ವಿಭಾಗವು ಕರ್ನಾಟಕದ ಆದಾಯದಲ್ಲಿ ಕಳೆದ ಪತ್ತಾರು ವರ್ಷಗಳಲ್ಲಿ ಇಡೀ ರಾಜ್ಯಕ್ಕೇ ಮೊದಲನೆಯದಾಗಿದೆ. ಅದಕ್ಕೆ ಅವರದ್ದೇ ಆದಂತಹ ದಾಖಲೆ ಇದೆ. ಇದು ಮಾನ್ಯ ಸಚಿವರಿಗೂ ಕೂಡ ಗೊತ್ತಿದೆ. ಇಡೀ ರಾಜ್ಯದ ಕೆ.ಎಸ್.ಆರ್.ಟಿ.ಸಿ. ಆದಾಯಕ್ಕೆ ಹೆಚ್ಚಿನ ಆದಾಯ ನಮ್ಮ ಬಿಜಾಪುರ ಡಿಪೋದಿಂದ ಬರುತ್ತಿದೆ. ಆದರೆ ಅಲ್ಲಿ ಸ್ಟಾಂಡ್‌ಗಳ ಸ್ಥಿತಿ ಕೆಟ್ಟಿದೆ. ಇಲ್ಲಿ ಅಧಿಕಾರಿಗಳು ಕೊಟ್ಟಿರುವ ವಿವರದ ತಪ್ಪು ಇದೆ ಆದರೆ ಮಂತ್ರಿಗಳದಲ್ಲ. ೨೫ ಹಳ್ಳಿಗಳಿಗೆ ಬಸ್ ನಿಲ್ದಾಣಗಳಲ್ಲಿ ನೀರಿನ ಸೌಕರ್ಯ ಇದೆ ಎಂದಿದ್ದಾರೆ. ಇದು ಸರಿಯಲ್ಲ. ನನ್ನ ಕ್ಷೇತ್ರವಾದ ಬೀಳಗಿ ಬಸ್ ನಿಲ್ದಾಣದಲ್ಲಿ ನೀರಿನ ಸೌಕರ್ಯ ಒದಗಿಸುವುದರಿಂದ ಪ್ರಯಾಣಿಕರು ತೊಂದರೆ ಪಡುತ್ತಿದ್ದಾರೆ. ಪಕ್ಕದ ಹೋಟೆಲಿಗೆ ನೀರಿಗಾಗಿ ಹೋದರೆ ಚಾ ತಗೊಳ್ರಿ ನೀರು ಕೊಡುತ್ತೇವೆ ಎನ್ನುತ್ತಾರೆ. ಆದ್ದರಿಂದ ಬೀಳಗಿ ನಿಲ್ದಾಣಕ್ಕೆ ನೀರಿನ ಸೌಕರ್ಯ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ಮಾಡಿಸಿಕೊಡುತ್ತೇನೆ.

ಬಾಕಿಯಿರುವ ಮಾರಾಟ ತೆರಿಗೆ ಬಗ್ಗೆ

೧೮೧೧. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೫೭-೮೮ನೇ ಸಾಲಿನಿಂದ ಈವರೆಗೆ ಬಾಕಿ ಇರುವ ಮಾರಾಟ ತೆರಿಗೆಯ ಮೊತ್ತವೆಷ್ಟು ಹಾಗೂ ಬಾಕಿದಾರರಿಂದ ವಸೂಲ್ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೩೧-೦೨-೧೯೮೮ರಂದು ಇದ್ದಂತೆ ವಸೂಲಾಗಬೇಕಾದ ಬಾಕಿ ಮಾರಾಟ ತೆರಿಗೆಯು ರೂ. ೧೩೬.೨೧ ಕೋಟಿ. ಮಾರಾಟ ತೆರಿಗೆ ಬಾಕಿಯನ್ನು ವಸೂಲು ಮಾಡಲು ವಿಶೇಷ ಏರ್ಪಾಡುಗಳನ್ನು ಮಾಡಲಾಗಿದೆ. ಕೋರ್ಟಿನಿಂದ ತಡೆಯಾಜ್ಞೆ ಇರುವಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಗಳನ್ನು ಮುಕ್ತಗೊಳಿಸಲು ಕ್ರಮ ಕೈಗೊಳ್ಳಲು ರಾಜ್ಯ ಅಡ್ವೋಕೇಟ್ ಜನರಲ್ ರವರನ್ನು ಕೋರಲಾಗಿದೆ. ಕಾಯಿದೆ ಪ್ರಕಾರ ಲಭ್ಯವಿರುವ ಎಲ್ಲಾ ಸಾಧ್ಯತೆಗಳ ಅವಕಾಶಗಳನ್ವಯ ಕ್ರಮ ಕೈಗೊಂಡ ನಂತರವೂ ತೆರಿಗೆ ವಸೂಲಾಗದಿರುವ ಪ್ರಕರಣಗಳನ್ನು ಭೂಕಂದಾಯ ಬಾಕಿಯಂತೆ ವಸೂಲಿ ಮಾಡಲು ಕಂದಾಯ ಇಲಾಖೆ ಅಧಿಕಾರಿಗಳಿಗೆ ಕಳುಹಿಸಲಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೧-೦೨-೮೮ರವರೆಗೆ ೧೩೬ ಕೋಟಿ ಅರಿಯರ್ಸ್ ಇದೆ ಎಂದಿದ್ದಾರೆ. ಇದರಲ್ಲಿ ಕೋರ್ಟ್ ತಡೆಯಾಜ್ಞೆಯಿಂದ ಎಷ್ಟು ಇದೆ ಮತ್ತು ಟ್ರಿಬ್ಯೂನಲ್‌ನಲ್ಲಿ ಡಿಪಾರ್ಟ್‌ಮೆಂಟ್ ಅಧಿಕಾರಿಗಳ ಸ್ಟೇ ಆರ್ಡರ್ ಪ್ರಭಾವದಿಂದ ಎಷ್ಟು ರೆಕವರಿ ಆಗುವುದು ನಿಂತಿದೆ ಮತ್ತು ಲೇಟೆಸ್ಟ್ ಮಾರ್ಚ್ ಅಂತ್ಯದ ವರೆಗೆ ಎಷ್ಟು ಅರಿಯರ್ಸ್ ಇದೆ ಹೇಳಿ ?

ಶ್ರೀ ರಾಮಕೃಷ್ಣ ಹೆಗಡೆ —ಕೋರ್ಟ್ ಟ್ರಿಬ್ಯೂನಲ್ ಮುಂತಾದ ಅಥಾರಿಟಿಗಳಲ್ಲಿ ಸ್ಟೇ ಆರ್ಡರ್ ಕೊಟ್ಟು ಬಾಕಿ ಇರುವುದು ೬೪.೭೭ ಕೋಟಿ ರೂಗಳು ಇದರಲ್ಲಿ ಸುಪ್ರೀಂ ಕೋರ್ಟಿನಲ್ಲಿ ೨೪ ಕೋಟಿ ರೂಪಾಯಿ ಗಳಷ್ಟು ಕಾಫಿ ಬೋರ್ಡಿನಿಂದ ಬರಬೇಕು. ಇನ್ನು ಸುಪ್ರೀಂ ಕೋರ್ಟಿನಲ್ಲಿ ಕಳೆದ ಏರಡು ವರ್ಷದಲ್ಲಿ ಕೇಸಿನ ವಿಚಾರಣೆ ನಡೆಯುತ್ತಿದ್ದ ಕಳೆದ ನಾಲ್ಕೈದು ವರ್ಷದ್ದು ಸೇರಿಸಿದರೆ ೧೦೦ ಕೋಟಿ ಅದರದೇ ಆಗಬಹುದು Recoverable rrears 34 crores 52 lakhs.... Amount which